# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಬಸನಗೌಡ ಬಾದರ್ಲಿ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **258** |
| ಉತ್ತರಿಸಬೇಕಾದ ದಿನಾಂಕ | : | 18.08.2026 |
| ಉತ್ತರಿಸಬೇಕಾದ ಸಚಿವರು | : | ವಸತಿ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಸಿಂಧನೂರು ತಾಲ್ಲೂಕಿಗೆ 2023 ರಿಂದ ಇಲ್ಲಿಯವರೆಗೆ ರಾಜೀವ್ ಗಾಂಧಿ ವಸತಿ ನಿಗಮದಿಂದ ಎಷ್ಟು ಮನೆಗಳನ್ನು ಮಂಜೂರಾಗಿವೆ;</td><td>2023-24 ರಿಂದ 2025-26ನೇ ಸಾಲಿಗೆ ರಾಜ್ಯ ಸರ್ಕಾರದ ವಸತಿ ಯೋಜನೆಗಳಡಿ ಆಯವ್ಯಯದಲ್ಲಿ ಯಾವುದೇ ಹೊಸ ಮನೆಗಳ ಗುರಿಯನ್ನು ಹಂಚಿಕೆ ಮಾಡಿರುವುದಿಲ್ಲ.</td></tr>
<tr><td>ಆ)</td><td>ಮಂಜೂರಾಗಿರುವ ಮನೆಗಳಲ್ಲಿ ಈಗಾಗಲೇ ಎಷ್ಟು ಮನೆಗಳು ಪೂರ್ಣಗೊಂಡು ಹಣ ಬಿಡುಗಡೆಯಾಗಿವೆ;</td><td rowspan="2">ಕೇಂದ್ರ ಸರ್ಕಾರವು 2024-2025ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನ (ಗ್ರಾಮೀಣ) ಯೋಜನೆಯಡಿ ಸಿಂಧನೂರು ತಾಲ್ಲೂಕಿಗೆ ಒಟ್ಟು 2602 ಮನೆಗಳ ಗುರಿಯನ್ನು ನೀಡಲಾಗಿದ್ದು, ವಿವರ ಈ ಕೆಳಕಂಡಂತಿದೆ.<br><table><tr><th>ಗುರಿ</th><th>ಆಯ್ಕೆ</th><th>ಆಯ್ಕೆಗೆ ಬಾಕಿ</th><th>ಪೂರ್ಣ</th><th>ಪ್ರಗತಿ</th><th>ಪ್ರಾರಂಭವಾಗಬೇಕಿರುವುದು</th></tr><tr><td>2602</td><td>1572</td><td>1030</td><td>61</td><td>222</td><td>1289</td></tr></table><br>ಒಟ್ಟು 1030 ಗುರಿಗೆ ಎದುರಾಗಿ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ.<br><br>2026-27ನೇ ಸಾಲಿನ ಆಯವ್ಯಯದಲ್ಲಿ ಸರ್ವರಿಗೂ ಸೂರು ಕಲ್ಪಿಸುವ ಉದ್ದೇಶದಿಂದ ರಾಜ್ಯದ ವಿವಿಧ ವಸತಿ ಯೋಜನೆಗಳಡಿ BLC ಆಧಾರಿತ ಒಂದು ಲಕ್ಷ ಮನೆಗಳ ಹೊಸ ಗುರಿಯನ್ನು ಮಂಜೂರು ಮಾಡಲು ಘೋಷಿಸಲಾಗಿದ್ದು, ಸಿಂಧನೂರು ತಾಲ್ಲೂಕಿನ ವಸತಿರಹಿತರಿಗೆ ಗುರಿ ಹಂಚಿಕೆಗೆ ಕ್ರಮ ವಹಿಸಲಾಗುತ್ತಿದೆ.<br><br>ಪ್ರಧಾನ ಮಂತ್ರಿ ಆವಾಸ್ ಯೋಜನ (ಗ್ರಾಮೀಣ) ಯೋಜನೆಗಳಡಿ ಸಿಂಧನೂರು ತಾಲ್ಲೂಕಿನಲ್ಲಿ ಆಯ್ಕೆಯಾದ ಫಲಾನುಭವಿಗಳ ಪೈಕಿ ಈವರೆಗೆ 61 ಮನೆಗಳು ಪೂರ್ಣಗೊಂಡಿದ್ದು, ಈ ಮನೆಗಳಿಗೆ ರೂ.51.30 ಲಕ್ಷಗಳ ಹಣ ಬಿಡುಗಡೆಯಾಗಿರುತ್ತದೆ.</td></tr>
<tr><td>ಇ)</td><td>ಪೂರ್ಣಗೊಳ್ಳಲು ಬಾಕಿಯಿರುವ ಮನೆಗಳ ಸಂಖ್ಯೆ ಎಷ್ಟು;</td></tr>
<tr><td>ಈ)</td><td>ಯಾವ ಕಾಲಮಿತಿಯೊಳಗೆ ಸದರಿ ಮನೆಗಳ ಪೂರ್ಣ ಹಣ ಬಿಡುಗಡೆಯಾಗುತ್ತದೆ?</td><td>ಕೇಂದ್ರ ಸರ್ಕಾರದ ಪಿ.ಎಂ.ಎ.ವೈ-ಗ್ರಾಮೀಣ ಯೋಜನೆಯಡಿ ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡಲು SNA SPARSH ಜಾರಿಗೆ ತಂದಿದ್ದು, ಈ ಪ್ರಕ್ರಿಯೆಯಡಿ ಕೇಂದ್ರ ಸರ್ಕಾರದ Awaasoft ತತ್ರಾಂಶ ಮತ್ತು ಖಜಾನೆ-2 ನಡುವೆ Integration ಮಾಡಬೇಕಿರುತ್ತದೆ.<br><br>ಪ್ರಸ್ತುತ ಕೇಂದ್ರ ಸರ್ಕಾರದ Awaasoft ತತ್ರಾಂಶ ಮತ್ತು ಖಜಾನೆ-2 ನಡುವೆ Integration ಪ್ರಕ್ರಿಯೆಯು ದಿ:13.08.2026 ಮುಕ್ತಾಯವಾಗಿದ್ದು, ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡುವಂತೆ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳಿಗೆ ಸೂಚನೆ ನೀಡಲಾಗಿದೆ. ಅದರಂತೆ ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತಿದೆ.</td></tr>
</table>

ಸಂಖ್ಯೆ: ವಇ 284 ಹೆಚ್‌ಎಂ 2026

(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)
ವಸತಿ ಸಚಿವರು.